# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
# <u>ಅಫಜಲಪೂರ</u>

ಸಿಸಿ ನಂ. *226/2020*

ಚಾಸಾ-01 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 05.09.2024

| | | |
|---|---|---|
| ಹೆಸರು | ಃ | ಲಕ್ಷ್ಮೀ |
| ತಂದೆಯ ಹೆಸರು | ಃ | ರೇವಣಸಿದ್ದಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಪಿಡಿಓ |
| ವಾಸಸ್ಥಳ | ಃ | ಚಿಂಚೋಳಿ ತಾಃ ದೇವದುರ್ಗ |

ಃ **<u>ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>** ಃ

ನಾನು ಬಿದನೂರ ಗ್ರಾಮ ಪಂಚಾಯತಿಯಲ್ಲಿ 2018 ರಿಂದ 2020 ರ ವರೆಗೆ ಪಿಡಿಓ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.04.2020 ರಂದು ಬಿದನೂರ ಗ್ರಾಮದ ಎನ್ನುವವರು ನನಗೆ ಫೋನ ಕರೆ ಮಾಡಿ ಬಿದನೂರ ಗ್ರಾಮದಲ್ಲಿ ತೆರೆದ ಭಾವಿ ಇದ್ದು ಅದನ್ನು ಗ್ರಾಮಸ್ಥರು ಕುಡಿಯಲು ಉಪಯೋಗಿಸುತ್ತಿದ್ದು, ಸದರಿ ಭಾವಿಯ ಪಕ್ಕ 5-ಜನ ವ್ಯಕ್ತಿಗಳು ಪೈಜಾಮ ಧರಿಸಿದ್ದು, ಗಡ್ಡ ಬಿಟ್ಟಿದ್ದು ಹಾಗೂ ಕೈಯಲ್ಲಿ ಒಂದು ಕ್ಯಾನ ಹಿಡಿದುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ, ಆಗ ಆ ವ್ಯಕ್ತಿಗಳನ್ನು ಅವರು ಮಾತನಾಡಿಸಿದಾಗ ಅವರುಗಳು ಮಾತನಾಡಿರುವುದಿಲ್ಲಾ, ಕೈಯಲ್ಲಿ ಇದ್ದ ಕ್ಯಾನ ಖಾಲಿ ಇತ್ತು, ಆ ನಂತರ ನಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಸದ್ಯಸರು ಹಾಗೂ ಕೆಲವೂ ಗ್ರಾಮಸ್ದರೊಂದಿಗೆ ಸದರಿ ಸ್ದಳಕ್ಕೆ ಹೋಗಿ ಪರಿಶೀಲಿಸಿಲಾಯಿತು, ಆ ನಂತರ ನನಗೆ ಕರೆ ಮಾಡಿದ ಹಣಮಂತನನ್ನು ಸ್ದಳಕ್ಕೆ ಕರೆಸಿದ್ದೆವು, ಆಗ ನಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಸದ್ಯಸರು ಆತನನ್ನು ವಿಚಾರಿಸಿದಾಗ ಆತನ್ನು ನಿನ್ನೆ ಈ ರೀತಿ

ಆಗಿತ್ತು ಎಂದು ತಿಳಿಸಿರುತ್ತಾನೆ. ಸದರಿ ಭಾವಿಯು ಎರಡು ಊರಿನ ಕುಡಿಯುವ ನೀರಿನ ಮೂಲವಾಗಿದ್ದರಿಂದ ಸದರಿ ಭಾವಿಯ ನೀರನ್ನು ಪರೀಕ್ಷೆಗೆ ಕಳುಹಿಸಿ ಆ ನಂತರ ಸದರಿ ಹಣಮಂತನ ಮೇಲೆ ಪೋಲಿಸರ ಮುಂದೆ ದೂರು ನೀಡಿದ್ದು ಇರುತ್ತದೆ. ಆ ನಂತರ ಮರು ದಿನ ಗುನ್ನೆ ಸ್ಥಳಕ್ಕೆ ಪೋಲಿಸರು ಬಂದಿದ್ದು ನಾವು ಸ್ಥಳವನ್ನು ತೋರಿಸಿದ್ದು, ಪೋಲಿಸರು ಆರೋಪಿತನನ್ನು ವಿಚಾರಿಸಿದಾಗ ಆರೋಪಿಯು ಈ ರೀತಿ ಹೇಳಿದ್ದರಿಂದ ಸದರಿ ಭಾವಿ ನೀರು ಜನರು ಉಪಯೋಗವಾಗದೇ ಇದ್ದಾಗ ತನ್ನ ಹೊಲಕ್ಕೆ ಬರುತ್ತದೆ ಎಂದು ಹೇಳಿರುತ್ತಾನೆ.

ಸಾಕ್ಷಿಗೆ ದೂರನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಲಸಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಶ್ರೀ ಡಿ.ಎಂ.ಡಿ. ವಕೀಲರಿಂದ**

ದಿಃ13.04.2020 ರಂದು ನಾನು ಬೆಳಗ್ಗೆ 10.00 ರಿಂದ ಸಾಯಂಕಾಲ 05.30 ರ ವರೆಗೆ ಕಚೇರಿಯ ಕರ್ತವ್ಯದಲ್ಲಿ ಇದ್ದೆ, ಸದರಿ ದಿನದಂದು ಕೋವಿಡ-19 ಇತ್ತು ಎಂದರೆ ಸರಿ. ಸದರಿ ದಿನದಂದು ಜನರು ಯಾರು ಹೊರಗೆ ಬರುತ್ತಿರಲಿಲ್ಲಾ ಎಂದರೆ ಸರಿ. ಬಿದನೂರ ಗ್ರಾಮದ ಪ್ರತಿಯೊಬ್ಬ ಗ್ರಾಮಸ್ಥರ ಪರಿಚಯ ಇರುತ್ತದೆ. ಆರೋಪಿತ ಸ್ವಂತ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ, ಆತ ಕೂಲಿ ಮಾಡಿ ಬದುಕುತ್ತಾನೆ ಎಂದರೆ ನನಗೆ ಗೊತ್ತಿಲ್ಲ, ಆರೋಪಿ ಮತ್ತು ನನ್ನ ನಡುವೆ ಈ ಮೊದಲು ವಾಗ್ವಾದ ಆಗಿತ್ತು ಎಂದರೆ ಸರಿಯಲ್ಲ. ಆರೋಪಿತನು ಏಪ್ರಿಲ್ 13, 2020 ರಂದು ಕರೆ ಮಾಡಿರುತ್ತಾನೆ. ಸದರಿ ವಿಷಯವನ್ನು ನಾನು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ. ಯಾವ ದೂರವಾಣಿ ನಂಬರನಿಂದ ಕರೆ ಮಾಡಿರುತ್ತಾನೆ ಎಂದು ತಿಳಿಸಿರುವುದಿಲ್ಲಾ. ತನಿಖೆ ಕಾಲಕ್ಕೆ ತನಿಖೆಯಾಧಿಕಾರಿ ರವರಿಗೆ ಯಾವ ನಂಬರನಿಂದ ಕರೆ ಮಾಡಿದ್ದ ಬಗ್ಗೆ ತಿಳಿಸಿರುವುದಿಲ್ಲಾ.

ಕ್ಯಾನನ್ನು ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕ್ಯಾನ ಇರುವ ಕುರಿತು ಫೋನ್ ಕರೆಯಲ್ಲಿ ತಿಳಿಸಿರುತ್ತಾರೆ, ಅವರಳ್ಳಿ ಮತ್ತು ಬಿದನೂರ ಗ್ರಾಮಕ್ಕೆ ಸದರಿ ಭಾವಿಯಿಂದ ನೀರಿನ

ಪೈಪ ಲೈನ ಇದೆ ಎಂದರೆ ಸರಿ. ಸದರಿ ಭಾವಿಯ ನೀರನ್ನು ಎತ್ತಿದಾಗ ಅದು ನೇರವಾಗಿ ಊರಲ್ಲಿ ಇರುವ ಭಾವಿಗೆ ಸೇರುತ್ತದೆ. ದಿಃ14.03.2020 ರಂದು ಸದರಿ ಘಟನೆಯನ್ನು ನಾನು ಮತ್ತು ಊರಿನ ಅಧ್ಯಕ್ಷರು, ಸದ್ಯಸರು ಮತ್ತು ಗ್ರಾಮಸ್ಥರು ಇದ್ದು ಅವರ ಸಮಕ್ಷಮ ಪೋಲಿಸರಿಗೆ ತೋರಿಸಿರುತ್ತೇವೆ. ಘಟನಾ ಸ್ಥಳದ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲಾ.ಭಾವಿಯ ಸುತ್ತ-ಮುತ್ತ ಆರೋಪಿಯ ಹೊಲ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ನನಗೆ ಯಾವತ್ತು ಕರೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಇರುವ ಹಳೇ ವೈರತ್ವದಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಭಾವಿ ಹತ್ತಿರ 5-ಜನ ಕೈಯಲ್ಲಿ ಕ್ಯಾನ ಹಿಡಿದು ನಿಂತಿರುತ್ತಾರೆ ಎಂದು ಆರೋಪಿಯು ತಿಳಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ. 226/2020

ಚಾಸಾ- 02 ಪ್ರಾಸಾ-02

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 05.09.2024

ಹೆಸರು : ಶ್ರೀನಾಥ

ತಂದೆಯ ಹೆಸರು : ಮಲ್ಕಣ್ಣ

ವಯಸ್ಸು : 39 ವರ್ಷ

ಉದ್ಯೋಗ : ಚಾಲಕ

ವಾಸಸ್ಥಳ : ಬಿದನೂರ ಗ್ರಾಮ

**: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ಚಾಸಾ-1 ಮತ್ತು 3 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ**-2** ಮತ್ತು ಸಾಕ್ಷಿಯ ಸಹಿಯನ್ನು ನಿಪಿ**-2(ಎ)** ಎಂದು ಗುರುತಿಸಲಾಯಿತು.

ನಮ್ಮೂರಿನ ಕೆರೆಯ ಜಾಜು ಇರುವ ಭಾವಿಯ ಹತ್ತಿರ ಚಾಸಾ-1 ಮತ್ತು ಪೋಲಿಸರು ಬಂದಿದ್ದು ಅವರು ನನ್ನಿಂದ ಸಹಿ ಪಡೆದಿರುತ್ತಾರೆ. ನನ್ನ ಮುಂದೆ ಯಾವ ಪಂಚನಾಮೆಯನ್ನು ಮಾಡಿಲ್ಲ, ಪಂಚನಾಮೆ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಬಂದು-ಹೋಗಿರುವ ಕುರಿತು ಒಂದು ಸಹಿ ಪಡೆದಿರುತ್ತಾರೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>**

ದಿಃ 14.03.2020 ರಂದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪೋಲಿಸರು ಸಾಯಂಕಾಲ 04.35 ರಿಂದ 05.35 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸಮೂದಾಯಗಳ ನಡುವೆ ವೈಮನಸ್ಸು ಮೂಡಿಸಲು ಆರೋಪಿಯು ಕರೆ ಮಾಡಿ ಸುಳ್ಳು ಮಾಹಿತಿ ನೀಡಿರುತ್ತಾನೆ ಅಂತಾ ಪಂಚನಾಮೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲುಃ ಆರೋಪಿತರ ಶ್ರೀ ಡಿ.ಎಂ.ಡಿ. ವಕೀಲರಿಂದ</u>**

ನಾನು ಚಾಲಕನಿರುತ್ತೇನೆ. ನಾನು ಕಲಬುರಗಿಗೆ ಹೋಗಿ-ಬಂದು ಮಾಡುತ್ತೇನೆ. ದಿಃ14.03.2020 ರಂದು ನಾನು ಬಿದನೂರ ಗ್ರಾಮದಲ್ಲಿ ಇದ್ದೆನು, ಆ ಸಮಯದಲ್ಲಿ ಕೋವಿಡ-19 ಇದಿದ್ದರಿಂದ ಸಾರ್ವಜನಿಕರು ಮನೆಯಿಂದ ಹೊರಗೆ ಬರುತ್ತಿರಲಿಲ್ಲಾ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ - ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ